Reg. No. : ....................................

Name : ........................................

**FY-16**

**FIRST YEAR HIGHER SECONDARY EXAMINATION, JUNE 2022**

Part – III

**KANNADA (Optional)**

Maximum : 80 Scores

Time : **2½** Hours

Cool-off time : **15** Minutes

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

1. 'ನುಡಿದರೆ ಮುತ್ತಿನ ಹಾರದಂತಿರಬೇಕು' – ಎಂದು ಹೇಳಿದವರು ಯಾರು ?

   (ಜೇಡರ ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ, ಹೆಳವನಕಟ್ಟೆ ಗಿರಿಯಮ್ಮ)

2. 'ಸತ್ಯವಂತರ ಸಂಗವಿರಲು ತೀರ್ಥವೇತಕೆ' ಎನ್ನುವ ಪಾಠವು ಯಾವ ಕಾವ್ಯ ಪ್ರಕಾರಕ್ಕೆ ಸೇರುತ್ತದೆ ?

   (ಜನಪದ ಗೀತೆ, ವಚನ, ಸಾಂಗತ್ಯ, ಕೀರ್ತನೆ)

3. ಮಾತಾಪಿತರನು ಬಳಲಿಸಿದಾತನು ಏನನ್ನು ಮಾಡಿದರೆ ಫಲವಿಲ್ಲ ?

   (ಯಾತ್ರೆಯನು, ಜಪವನು, ನಟನೆಯನು, ವ್ರತಗಳನು)

4. ಜೇಡರ ದಾಸಿಮಯ್ಯನ ವಚನಗಳ ಅಂಕಿತ ಯಾವುದು ?

   (ಕೂಡಲಸಂಗಮದೇವ, ರಾಮನಾಥ, ಚೆನ್ನಮಲ್ಲಿಕಾರ್ಜುನ, ಗುಹೇಶ್ವರ)

**5 ರಿಂದ 10 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(4 × 1 = 4)**

5. ಕಂಪು – ಈ ಪದದ ಅರ್ಥವನ್ನು ಬರೆಯಿರಿ.

6. ಜಲ – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

7. ಬಿಸಿಲ್ಗುದುರೆ – ಈ ಪದವನ್ನು ವಿಂಗಡಿಸಿ ಬರೆಯಿರಿ.

8. ಆಕಾಶ – ಈ ಪದದ ತದ್ಭವ ರೂಪವನ್ನು ಬರೆಯಿರಿ.

9. ವಿಶಿಷ್ಟ – ಈ ಪದದ ಭಾವನಾಮ ರೂಪವನ್ನು ಬರೆಯಿರಿ.

10. "ಕರುವನ್ನು ಕಾಣುವ ತವಕದಿಂದ ಪುಣ್ಯಕೋಟಿಯು ಅವಸರವಸರವಾಗಿ ಮನೆಯ ಕಡೆಗೆ ನಡೆಯಿತು." ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ.

**11 ರಿಂದ 18 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.** **(5 × 2 = 10)**

11. ನಾನು ಊಟ ಮಾಡುವೆನು – ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ ಬರೆಯಿರಿ.

12. ಬೈಬ್ಯಾಡ, ಸೌದಿಲ್ಲ, ಕೊಡಬ್ಯಾಡ, ಮಗಳಂಗ – ಈ ಪದಗಳನ್ನು ಶಿಷ್ಟಗನ್ನಡದಲ್ಲಿ ಬರೆಯಿರಿ.

13. "ಸಂಗೀತವನ್ನು ಆಲಿಸಿದ ಪ್ರೇಕ್ಷಕರು ಸಂತೋಷದಿಂದ <u>ತಲೆದೂಗಿದರು</u>." ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಸ್ವಂತ ವಾಕ್ಯವೊಂದನ್ನು ರಚಿಸಿರಿ.

14. ಜಲ ಸಂರಕ್ಷಣೆಯ ಮಹತ್ವವನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ.

15. "ಹೀನಗುಣಂಗಳು ಹಿಂಗದೆ ಗಂಗೆಯ ಸ್ನಾನವ ಮಾಡಿದರೇನು ಫಲ". ಕೀರ್ತನೆಯ ಈ ಸಾಲಿನ ತಾತ್ಪರ್ಯವನ್ನು ಬರೆಯಿರಿ.

16. "ಬಳೆಗಾರನು ಚಿನ್ನದ ಬಳೆಗಳ ವ್ಯಾಪಾರದಿಂದ ಸಿರಿವಂತನಾದನು". ಈ ವಾಕ್ಯದಲ್ಲಿ ಬಂದಿರುವ ತದ್ಧಿತ ಪ್ರತ್ಯಯವಿರುವ ಪದಗಳನ್ನು ಗುರುತಿಸಿ ಬರೆಯಿರಿ.

17. "ಭೀಮನು ಬಕಾಸುರನನ್ನು ಕೊಂದು ಏಕಚಕ್ರ ನಗರದ ಜನರನ್ನು ಸಂಕಷ್ಟದಿಂದ ಪಾರು ಮಾಡಿದನು". ಈ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಬರೆಯಿರಿ.

18. "ಸಮಯಕ್ಕೆ ಸರಿಯಾಗಿ ಬಸ್ಸು ಸಿಗದ ಕಾರಣ ಆಫೀಸಿಗೆ ತಲುಪುವುದು ತಡವಾಯಿತು". ಈ ವಾಕ್ಯದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಗುರುತಿಸಿ ಬರೆಯಿರಿ.

**19 ರಿಂದ 25 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4 × 4 = 16)**

19. ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಮೊದಲಗಿತ್ತಿ | ಕೆ.ವಿ. ತಿರುಮಲೇಶ್ |
| ಅಶ್ವತ್ಥಾಮ | ಕೆ.ಎಸ್. ನರಸಿಂಹಸ್ವಾಮಿ |
| ಬರಿಗೊಡಗಳಿಗೆ ಸಮಾಧಾನ | ಸು.ರಂ. ಎಕ್ಕುಂಡಿ |
| ಪೆಂಟಯ್ಯನ ಅಂಗಿ | ದ.ರಾ. ಬೇಂದ್ರೆ |

20. ನಿಮ್ಮ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭದ ಪತ್ರಿಕಾ ವರದಿಯೊಂದನ್ನು ಸಿದ್ಧಪಡಿಸಿರಿ.

21. ಈ ಕೆಳಗಿನ ಕೀರ್ತನೆಯ ಸಾಲುಗಳ ಆಶಯವನ್ನು ಬರೆಯಿರಿ.

ತಾನು ಉಣ್ಣದೆ ಪರರಿಗಿಕ್ಕದ ಧನವಿದ್ದೇತಕೆ
ಮಾನಹೀನವಾಗಿ ಬಾಳುವ ಮನುಜರೇತಕೆ
ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ
ತನ್ನ ಬಳಗವೆರಸಿ ಉಣ್ಣದ ಭಾಗ್ಯವೇತಕೆ

22. ನಿರ್ಮಲ ಭಕ್ತಿಗೆ ನಿರ್ದಿಷ್ಟ ಸ್ವರೂಪ ಇಲ್ಲ ಎಂಬುದನ್ನು ಎಸ್.ವಿ. ಪರಮೇಶ್ವರ ಭಟ್ಟರು ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ ಬಗೆ ಹೇಗೆ ? ಟಿಪ್ಪಣಿ ಬರೆಯಿರಿ.

23. ಬಡವನಿಗೆ ಸಾವ ಕೊಡಬ್ಯಾಡ ಎಂಬ ಮಾತನ್ನು 'ಕಣ್ಣಿ ಮುಂದ್ಯೆತೆ ಕೈಲಾಸ' ಜನಪದ ಗೀತೆಯಲ್ಲಿ ಸ್ಪಷ್ಟಪಡಿಸಿದ ಬಗೆಯನ್ನು ತಿಳಿಸಿರಿ.

24. 'ಬೆಳ್ಳಗಿರುವುದೆಲ್ಲಾ ಹಾಲಲ್ಲ' ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

25. 'ಬಾಶಿಂಗ ಬಲ' ಕಥೆ ನೀಡುವ ಸಂದೇಶವನ್ನು ಸಂಗ್ರಹಿಸಿ ಬರೆಯಿರಿ.

**26 ರಿಂದ 32 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. (5 × 6 = 30)**

26. ನಿಮ್ಮ ಊರಿನ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯುವುದಕ್ಕಾಗಿ ಮನವಿ ಪತ್ರವೊಂದನ್ನು ಸಿದ್ಧಪಡಿಸಿರಿ.

27. 'ಏಳಯ್ಯ ಬೆಳಗಾಯಿತು' ಹರಟೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

28. ಯಕ್ಷಗಾನ ತಾಳಮದ್ದಲೆಯ ಸ್ವರೂಪವನ್ನು 'ತಾಳಮದ್ದಲೆ' ಪಾಠದ ಹಿನ್ನೆಲೆಯಲ್ಲಿ ವಿವರಿಸಿ ಬರೆಯಿರಿ.

29. 'ಮೊದಲಗಿತ್ತಿ' ಕವನದ ಆಸ್ವಾದನಾ ಟಿಪ್ಪಣಿ ಬರೆಯಿರಿ.

30. ಉತ್ರಾಜಿಯ ಜೀವನ ದುರಂತಮಯವಾಗಿ ಪರಿಣಮಿಸಲು ಕಾರಣವೇನು ? 'ಉತ್ರಾಜಿ' ಜನಪದ ಗೀತೆಯ ಆಧಾರದಲ್ಲಿ ವಿವರಿಸಿ ಬರೆಯಿರಿ.

31. ದುಡಿಮೆಯ ಯಾಂತ್ರಿಕತೆಯಿಂದ ಬಿಡುಗಡೆಗೊಳ್ಳಲು ತುಡಿಯುವ ಮನಸ್ಸು ಪೆಂಟಯ್ಯನ ಪಾತ್ರದಲ್ಲಿ ಹೇಗೆ ಪ್ರಕಟಗೊಳ್ಳುತ್ತದೆ. 'ಪೆಂಟಯ್ಯನ ಅಂಗಿ' ಕವನದ ಆಧಾರದಲ್ಲಿ ವಿವರಿಸಿ ಬರೆಯಿರಿ.

32. ಚಂದ್ರಗುಪ್ತನ ಜಾಣ್ಮೆ, ಸಾಹಸಗಳು 'ಪಂಜರ ಪರೀಕ್ಷೆ' ಪಾಠದಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿ ಬರೆಯಿರಿ.

**33 ರಿಂದ 35 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ. (2 × 8 = 16)**

33. 'ಹೇಮಕೂಟದಿಂದ ಬಂದ ಮೇಲೆ' ಪಾಠದಲ್ಲಿ ಮೂಡಿ ಬಂದಿರುವ ಶಕುಂತಲೆಯ ಪಾತ್ರ ಚಿತ್ರಣವನ್ನು ಮಾಡಿರಿ.

34. ಅನೇಕ ಸಾಮಾಜಿಕ ಪಿಡುಗುಗಳು ಮಹಿಳಾ ಸಬಲೀಕರಣಕ್ಕೆ ಇಂದಿಗೂ ತೊಡಕಾಗಿಯೇ ನಿಂತಿವೆ. ಅವುಗಳಲ್ಲಿ ವರದಕ್ಷಿಣೆಯೂ ಒಂದು. ಇಂತಹ ಪಿಡುಗುಗಳನ್ನು ನಿವಾರಿಸಬೇಕಾದ ಕರ್ತವ್ಯ ನಮ್ಮೆಲ್ಲರದು. ಈ ಹಿನ್ನೆಲೆಯಲ್ಲಿ 'ವರದಕ್ಷಿಣೆ ಇಲ್ಲದ ಸಮಾಜ' ಎಂಬ ವಿಷಯದ ಕುರಿತು ಪ್ರಬಂಧವೊಂದನ್ನು ಸಿದ್ಧಪಡಿಸಿರಿ.

35. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ಕಥಾಸಾರವನ್ನು ನಿಮ್ಮ ಮಾತುಗಳಲ್ಲಿ ಸಂಕ್ಷಿಪ್ತವಾಗಿ ಬರೆಯಿರಿ.